**( ದಿನಾಂಕ 8-2-2017 ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.)**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 5ರ ಪರ ಶ್ರೀ ಎಸ್ಎಕೆ ವಕೀಲರಿಂದ**

ನನ್ನ ತಮ್ಮನಾದ ವೀರಭದ್ರಪ್ಪನು ಬಿಎ ಹಾಗೂ ಬಿಇಡ್‌ನ್ನು ಯಾವ ವರ್ಷ ಮುಗಿಸಿದ್ದಾರೆಂದು ನೆನಪಿಲ್ಲ, 1977 ರಲ್ಲಿ ಧಾರವಾಡದಲ್ಲಿ ಬಿಎಯನ್ನು, 1978 ನ್ನು ಬಿಇಡ್‌ನ್ನು ಹರಪನಹಳ್ಳಿಯಲ್ಲಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಮ್ಮನಿಗೆ ಹರಪನಹಳ್ಳಿಯಲ್ಲಿ ಬಿಇಡ್‌ಗೆ ಸರ್ಕಾರಿ ಸೀಟ್ ಸಿಕ್ಕಿತ್ತು, ವೀರಭದ್ರಪ್ಪನ ಹೆಂಡತಿ ಈಗ ಶಿಕ್ಷಕಿಯಾಗಿದ್ದಾರೆ. ನಾನು ಹಾಜರಿಸಿದ ನಿಪಿ-14 ರಂತೆ ವಾಟ್ನಿಯಾಗಿದೆ ಎಂದರೆ ಸಾಕ್ಷಿಯು ವಾಟ್ನಿಯಾಗಿಲ್ಲ ಎನ್ನುತ್ತಾರೆ. ಈಗ ನನಗೆ ಓದಿ ಹೇಳಿದ ನಿಪಿ-14 ಎಂಆರ್‌ಹೆಚ್ 29/13-14 ನ್ನು ನಾನೇ ಹಾಜರಿಸಿದ್ದೇನೆ. ಸದರಿ ದಾಖಲೆಯನ್ನು ನನ್ನ ತಂದೆ ತೀರಿಕೊಂಡ ನಂತರ ನಮ್ಮ ಎಲ್ಲರ ಹೆಸರನ್ನು ದಾಖಲಿಸಿದ ಬಗ್ಗೆ ಇದೆ. ನಿಪಿ-14 ಕ್ಕೆ ಅರ್ಜಿಯನ್ನು ನಾನು ಸಲ್ಲಿಸಿಲ್ಲ, ನಿಪಿ-14 ರಲ್ಲಿ ನನ್ನ ಸಹೋದರಿಯರ ಹೆಸರು ಇದೆಯಾ ಎಂದು ಕೇಳಲಾಗಿ, ಸಾಕ್ಷಿಯು ಅದರಲ್ಲಿ ನನ್ನ ತಮ್ಮನ ಮಕ್ಕಳ ಹೆಸರು ಇದೆ ಎನ್ನುತ್ತಾರೆ.

ನನ್ನ ಸಹೋದರಿ ಸುವರ್ಣವ್ವರವರ ವಾರಸುದಾರರು ಹಾಗೂ 2ನೇ ವಾದಿಯು ನಮ್ಮ ಮನೆತನಕ್ಕೆ ಸಂಬಂಧಪಟ್ಟ ಒಂದು ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದ ಕಾಲದಲ್ಲಿ ಹಿಸ್ಸೆಯಾದಾಗ ಎಂಆರ್ ನಂಬರ 23/82-83 ರ ಪ್ರಕಾರ ಅವರಿಗೆ ಸದರಿ ಆಸ್ತಿ ಬಂದಿತ್ತೇನೂ ಎಂದರೆ ಸಾಕ್ಷಿಯು ಅದು ಹಿಸ್ಸೆಯಲ್ಲ ಎನ್ನುತ್ತಾರೆ. ಎಂಆರ್ 23/82 ನನ್ನ ತಂದೆಯವರು ನನ್ನ ಹೆಣ್ಣು ಮಕ್ಕಳಿಂದ ಎಂದರೆ ನನ್ನ ಸಹೋದರಿಯರಿಂದ ಪಡೆದ ಸಾಲದ ತಿರುವಳಿಗಾಗಿ ಮಾಡಿದ್ದರು. ಈ ರೀತಿಯಾಗಿ ನನ್ನ ತಂದೆಯವರು ಸಾಲ ಪಡೆದ ಬಗ್ಗೆ ನನ್ನ ಸಹೋದರಿಯರಿಗೆ ಯಾವದೇ ದಾಖಲೆಯನ್ನು ಬರೆದುಕೊಟ್ಟಿರಲಿಲ್ಲ, ಕಮದೋಡ ಗ್ರಾಮದ ಸರ್ವೇ ನಂಬರ 13/1+2+3 ಕ್ಷೇತ್ರ 2 ಎಕರೆ 19 ಗುಂಟೆ ದಕ್ಷಿಣ ಭಾಗದ ಜಮೀನನ್ನು 2ನೇ ವಾದಿ ಹಾಗೂ ಸುವಣ್ಣವ್ವರ ವಾರಸುದಾರರು 71 ಸಾವಿರ ರೂ.ಗಳಿಗೆ ದಿನಾಂಕ 11-10-1993 ರಂದು ಕುಂಚೂರಮಠ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದೇ ರೀತಿಯಾಗಿ ಅದೇ ದಿನ ಉತ್ತರ ಭಾಗದ ಆಸ್ತಿಯನ್ನು ಸಹಾ 60 ಸಾವಿರ ರೂ.ಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರಿಬ್ಬರೂ ಕೂಡಿಯೇ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ತಂದೆ ತಮ್ಮ ಜೀವಿತ ಕಾಲದಲ್ಲಿ ಮನೆತನದ ಯಾವದೇ ಆಸ್ತಿಯನ್ನು ಮಾರಾಟ ಮಾಡಿಲ್ಲ, ತಮ್ಮ ಜೀವಿತ ಕಾಲದಲ್ಲಿ 7 ಎಕರೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ಇಲ್ಲ 1 ಎಕರೆ 10 ಗುಂಟೆ ಮಾತ್ರ ಎನ್ನುತ್ತಾರೆ. ಸುವರ್ಣವ್ವರ ವಾರಸುದಾರರು ಹಾಗೂ ಸರೋಜರವರು

ಮಾರಾಟ ಮಾಡಿದ ಕ್ರಯದ ಮೊತ್ತವಾದ 71 ಸಾವಿರ ಹಾಗೂ 60 ಸಾವಿರ ರೂ. ನಮ್ಮ ಮನೆತನಕ್ಕೆ ಬಂದಿರುವುದಿಲ್ಲ.

ಈ ಹಿಂದೆ ತನ್ನಹಿಸ್ಸೆಯನ್ನು ಕೇಳಿ 6ನೇ ಪ್ರತಿವಾದಿಯು ಓಎಸ್ 58/87 ದಾವೆಯನ್ನು ಸಲ್ಲಿಸಿದ್ದು, ಅದರಲ್ಲಿ ಅವಳ ಹಿಸ್ಸೆ ಕೊಡಬೇಕೆಂದು ತೀರ್ಪು ಆಗಿದೆ. ದಾವಾ ಆಸ್ತಿಯಲ್ಲಿ 2ನೇ ವಾದಿ ಹಾಗೂ ಸುವರ್ಣವ್ವರ ವಾರಸುದಾರರಿಗೆ ಯಾವದೇ ಹಿಸ್ಸೆ ಇರದೇ ಇದ್ದರೂ ಸಹಾ ಅವರ ಮಕ್ಕಳನ್ನು ನಮ್ಮ ತಮ್ಮಂದಿರಗೆ ಮದುವೆ ಮಾಡಿದ್ದರಿಂದ, ಅವರಿಗೆ ಬಂದ ಹಿಸ್ಸೆ ನಮ್ಮ ಮನೆತನಕ್ಕೆ ಬರುತ್ತದೆ ಎಂದು, ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹಾ, ನಮ್ಮ ತಂದೆ ತಮ್ಮ ಜೀವಿತ ಕಾಲದಲ್ಲಿ 7 ಎಕರೆ ಜಮೀನನ್ನು ಖರೀದಿಸಿದ ವಿಷಯ ಗೊತ್ತಿದ್ದರೂ ಸಹಾ, ಕೇವಲ 1 ಎಕರೆ 10 ಗುಂಟೆ ಜಮೀನನ್ನು ಖರೀದಿಸಿದ್ದರು ಎಂದು, ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 6ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ಎಂಆರ್‌ರವರನ್ನು, ಪ್ರತಿವಾದಿ 7 ರಿಂದ 11 ರ ಪರ ವಕೀಲರಾದ ಶ್ರೀ ಜಿಎಸ್ಎಸ್ ವಕೀಲರನ್ನು ಕೂಗಿಸಿ ಕರೆಸಲಾಯಿತು. ಗೈರು ಹಾಜರಿದ್ದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೆ ಸರಿ ಇದೆ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ರಾಣೇಬೆನ್ನೂರು